**ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಘನ ನ್ಯಾಯಾಲಯ ಬ್ಯಾಡಗಿ.**
**ಕ್ರಿಮಿನಲ್ ಪ್ರಕರಣ ಸಂಖ್ಯೆ: 480/2025**

ಪಿಡಬ್ಲ್ಯೂ: 01
ಸಿಡಬ್ಲ್ಯೂ: 03

| | | |
|---|---|---|
| ಹೆಸರು | : | ನಾಗಪ್ಪ ಯಲ್ಲಪ್ಪ ಏರೇಸಿಮಿ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಬ್ಯಾಡಗಿ |

ದಿನಾಂಕ : 15.10.2025 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿಯವರಿಂದ :**

ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ಮುದ್ದೆ ಮಾಲನ್ನು ವಶಪಡಿಸಿಕೊಂಡಿರುವುದಿಲ್ಲಾ. ಪಂಚಾನಾಮೆಯನ್ನು ನಿಪಿ–01 ಎಂದು, ಸಾಕ್ಷಿ ಸಹಿಯನ್ನು ನಿಪಿ–01(ಎ) ಎಂದು, ಮಾದರಿ ಸೀಲಿನ ನಕಲನ್ನು ನಿಪಿ–02 ಎಂದು, ಅದರ ಮೇಲಿನ ಸಹಿಯನ್ನು ನಿಪಿ–02(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲನ್ನು ಮು ಮಾ 01 ಎಂದು, ಸಾಕ್ಷಿ ಸಹಿಯನ್ನು ಮು ಮಾ–01(ಎ) ಎಂದು ಗುರುತಿಸಲಾಯಿತು. ಪಂಚರಿಗೆ ನೋಟಿಸಿಗೆ ಸಹಿಯನ್ನು 10 ತಿಂಗಳ ಹಿಂದೆ ಮಾಡಿರುತ್ತೇನೆ. ಸದರಿ ನೋಟಿಸನ್ನು ನಿಪಿ–03 ಎಂದು, ಸಾಕ್ಷಿ ಸಹಿಯನ್ನು ನಿಪಿ–03(ಎ) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಆದೇಶಿಸಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ ಹೆ ಕೆ ಸ ಅದೆ.

Sd/-

ಜೆಎಂಎಫ್‌ಸಿ, ಬ್ಯಾಡಗಿ.